

‘ನಾಕುತಂತಿ’ ಧಾರವಾಹಿಯ ಶೀರ್ಷಿಕೆ ಗೀತೆ

‘ಅರಿಶಿನ ಕುಂಕುಮ’ ಚಿತ್ರದ ಹಾಡು

‘ಬೆಳದಿಂಗಳಾಗಿ ಬಾ’ ಚಿತ್ರದ ಹಾಡು

ಹಾಡುತ್ತಿದ್ದರು. ನಾಯಕ ನಟ ಕೆಂಪರಾಜ ಅರಸ ಅವರು ಬಾದಶಹಾನ ಪಾತ್ರದಲ್ಲಿ ನಟಿಸಿದ್ದರು. ಹೆಸರಾಂತ ಕತೆಗಾರ-ಲೇಖಕ ಚದುರಂಗ ಅವರು ಚಿತ್ರದ ಕತೆ ರಚಿಸಿದ್ದರು. ಪಿ. ಕಾಳಿಂಗರಾಯರು ಪಾಶ್ಚಾತ್ಯ ವಾದ್ಯ ಬಳಸಿ ಸಂಗೀತ ನೀಡಿದ್ದರು. ಸಿನಿಮಾ ತೆರೆಕಂಡ ನಂತರ ಪ್ರೇಕ್ಷಕರನ್ನು ತನ್ನತ್ತ ಸೆಳೆಯುವಲ್ಲಿ ವಿಫಲವಾಯಿತು. ನಿರ್ಮಾಪಕರು ತೀವ್ರ ನಷ್ಟ ಅನುಭವಿಸಬೇಕಾಯಿತು. ಅದಕ್ಕೆ ಬೇಂದ್ರೆ ಕಾರಣರಾಗಿರಲಿಲ್ಲ. ಆದರೆ, ಮುಂದಿನ ಏಳು ವರ್ಷಗಳ ಕಾಲ ಬೇಂದ್ರೆ ಸಿನಿಮಾಲೋಕದಿಂದ ದೂರ ಉಳಿದರು.

1955ರಲ್ಲಿ ತೆರೆಕಂಡ ‘ವಿಚಿತ್ರ ಪ್ರಪಂಚ’ ಸಿನಿಮಾಕ್ಕಾಗಿ ಬೇಂದ್ರೆಯವರು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಒಪ್ಪಿದರು. ಸಿನಿಮಾದ ಸಂಭಾಷಣೆ, ಗೀತೆಗಳನ್ನೂ ರಚಿಸಿದ್ದರು. ಬೇಂದ್ರೆಯವರು ಅದಕ್ಕಾಗಿ ‘ದತ್ತಕುಮಾರ’ ಎಂಬ ಹೆಸರು ಬಳಸಿದ್ದರು. ಕುರುಡಿಯೊಬ್ಬಳನ್ನು ಸ್ವಾರ್ಥಕ್ಕೆ ಬಳಸುವ ವಸ್ತು ಹೊಂದಿರುವ ಕಥೆ ಅದಾಗಿತ್ತು. ಮೊದಲಿಗೆ ಸಂಭಾಷಣೆ ರಚಿಸುವ ಹೊಣೆಗಾರಿಕೆಯನ್ನು ಶಾಂತಕುಮಾರ ಎನ್ನುವವರಿಗೆ ವಹಿಸಲಾಗಿತ್ತು. ಅವರ ಸುದೀರ್ಘ ಸಂಭಾಷಣೆ ನೋಡಿ ಬೇಂದ್ರೆಯವರು ತಾವೇ ಸಂಭಾಷಣೆ ಬರೆಯುವುದಾಗಿ ಹೇಳಿದರು. ಹಾಗೆಯೇ ‘ಸಂಭಾಷಣೆಗಳನ್ನು ಬದಲಿಸಬಾರದು’ ಎಂಬ ಕಂಡೀಷನ್ ಹಾಕಿಯೇ ಬೇಂದ್ರೆಯವರು ಬರೆದುಕೊಟ್ಟಿದ್ದರು. ಆದರೆ, ಕಲಾವಿದರಿಗೆ ಆಡಲು